ಸೃಜನಿ
SRUJANI: Indian Journal of Innovative Research and Development (SIJIRD)
Volume-5 Issue- 4, September - October 2026, Pp. 64-70
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಬಸು ಬೇವಿನಗಿಡದ ಅವರ ಸಾಹಿತ್ಯದಲ್ಲಿ ಭಾಷೆ–ಶೈಲಿ–ತಂತ್ರ

**ಅರುಣ ಎಸ್. ಪಿ**
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಡೂರು.

**Abstract:**
*ಈ ಲೇಖನವು ಡಾ. ಬಸು ಬೇವಿನಗಿಡದ ಅವರ ಸಾಹಿತ್ಯದಲ್ಲಿ ಭಾಷೆ, ಶೈಲಿ ಮತ್ತು ತಂತ್ರಗಳ ವೈಶಿಷ್ಟ್ಯವನ್ನು ವಿಶ್ಲೇಷಿಸುತ್ತದೆ. ಅವರ ಕೃತಿಗಳಲ್ಲಿ ಕಾಣಿಸಿಕೊಳ್ಳುವ ಧಾರವಾಡದ ಪ್ರಾದೇಶಿಕ ಆಡುನುಡಿ, ಗ್ರಾಮೀಣ ಭಾಷೆಯ ಸೊಗಡು, ನಾಣ್ಣುಡಿಗಳು ಮತ್ತು ಸಹಜ ಸಂಭಾಷಣೆಗಳ ಬಳಕೆಯನ್ನು ಅಧ್ಯಯನ ಮಾಡಲಾಗಿದೆ. ಗ್ರಾಮೀಣ ಬದುಕು, ಮಾನವ ಸಂಬಂಧಗಳು, ಸಾಮಾಜಿಕ ಅಸಮಾನತೆ, ಶೋಷಣೆ ಮತ್ತು ಬದುಕಿನ ಸಂಕೀರ್ಣತೆಗಳನ್ನು ಅವರು ಪರಿಣಾಮಕಾರಿಯಾಗಿ ಚಿತ್ರಿಸಿರುವುದನ್ನು ಗುರುತಿಸಲಾಗಿದೆ. ಸರಳತೆ, ನೇರತೆ, ವಾಸ್ತವಿಕತೆ ಮತ್ತು ವೈಚಾರಿಕತೆಯು ಅವರ ಶೈಲಿಯ ಪ್ರಮುಖ ಲಕ್ಷಣಗಳಾಗಿದ್ದು, ವಿವಿಧ ಕಥನ ತಂತ್ರಗಳ ಮೂಲಕ ಓದುಗರನ್ನು ಚಿಂತನೆಗೆ ಪ್ರೇರೇಪಿಸುತ್ತವೆ. ಒಟ್ಟಾರೆಯಾಗಿ, ಬಸು ಬೇವಿನಗಿಡದವರ ಸಾಹಿತ್ಯವು ಪ್ರಾದೇಶಿಕ ಭಾಷಾ ಸೊಗಡು ಮತ್ತು ಸಮಾಜಮುಖಿ ಆಶಯಗಳ ಮೂಲಕ ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದೆ.*

**Keywords:** *ಬಸು ಬೇವಿನಗಿಡದ, ಪ್ರಾದೇಶಿಕ ಭಾಷೆ, ಗ್ರಾಮೀಣ ಸಾಹಿತ್ಯ, ಶೈಲಿ, ಕಥನ ತಂತ್ರ*

## ಪೀಠಿಕೆ

ಭಾಷೆಯೆಂದರೆ ಕೇವಲ ಸಂವಹನದ ಮಾಧ್ಯಮವಲ್ಲ; ಮಾನವನ ಐಹಿಕ, ಮಾನಸಿಕ ಹಾಗೂ ಸಾಮಾಜಿಕ ಕ್ಷೇಮಾಭ್ಯುದಯಕ್ಕೆ ಭಾಷೆಯೇ ಮೂಲಾಧಾರವಾಗಿದೆ. ಒಂದು ಸಮುದಾಯದ ಪ್ರತಿನಿಧಿತ್ವ ಮತ್ತು ಅಸ್ಮಿತೆ ಭಾಷೆಯಲ್ಲಿ ಜೀವಂತವಾಗಿರುತ್ತದೆ. ಪ್ರತಿಯೊಂದು ಪದವೂ ಯುಗಯುಗಾಂತರಗಳ ಸಂಸ್ಕಾರವನ್ನು ಪಡೆದ ಜೀವಂತ ಘಟಕವಾಗಿದೆ. ಭಾಷೆ ಸ್ಥಾವರವಾದುದಲ್ಲ; ಅದು ಜಂಗಮ ಸ್ವರೂಪದ್ದಾಗಿದೆ. ಸಾವಿಲ್ಲದ, ಕೇಡಿಲ್ಲದ ಜ್ಯೋತಿಯಂತೆ ಭಾಷೆ ಮಾನವನ ಭಾವನೆಗಳಿಗೆ ಆಶ್ರಯವಾಗಿದ್ದು, ಅವನ ಸಂಸ್ಕೃತಿಯ ಮೇಲೆ ಅಮೂಲ್ಯವಾದ ಬೆಳಕು ಬೀರುವ ಮಹತ್ತರ ಸಾಧನವಾಗಿದೆ. ಆದ್ದರಿಂದ ಮಾನವನ ಬೌದ್ಧಿಕ, ಮಾನಸಿಕ ಮತ್ತು ಸಾಂಸ್ಕೃತಿಕ ಪ್ರಗತಿಗೆ ಅನುಗುಣವಾಗಿ ಭಾಷೆಯು ವಿಶ್ವವಿಸ್ತಾರವಾಗಿ ಬೆಳೆಯುತ್ತ ಬಂದಿದೆ. ಭಾಷೆ ನಮ್ಮ ಸಂಸ್ಕೃತಿಯ ಆಗರವಾಗಿದೆ. ಕನ್ನಡಿಯಲ್ಲಿ ಕರಿಯು ಅಡಗಿರುವಂತೆ, ಭಾಷೆಯೊಳಗೆ ಸಂಸ್ಕೃತಿ ಕರಗಿ ಸಾಹಿತ್ಯವನ್ನು ಸೃಷ್ಟಿಸುತ್ತದೆ.

ಬಸು ಬೇವಿನಗಿಡದ ಅವರ ಕಥೆಗಳಲ್ಲಿ ಧಾರವಾಡ ಭಾಗದ ಗ್ರಾಮ್ಯ ಭಾಷೆ ಹಾಗೂ ಅಲ್ಲಿನ ಪರಿಸರದ ಸೊಗಡು ಮತ್ತು ಸೊಗಸನ್ನು ಓದುಗರು ಅನುಭವಿಸಬಹುದಾಗಿದೆ. ನಾವು ಅತಿ ಸಣ್ಣದೆಂದು ನಿರ್ಲಕ್ಷಿಸುವ ಘಟನೆಗಳು ಮತ್ತು ವ್ಯಕ್ತಿಗಳನ್ನು ಆಯ್ದುಕೊಂಡು ಅವರು ಕಥೆಗಳನ್ನು ಕಟ್ಟಿರುವುದರಿಂದ ಎಲ್ಲಿಯೂ ಕೃತಕತೆಯ ಭಾವನೆ

**Please cite this article as:** ಅರುಣ, ಎಸ್. ಪಿ. (2026). ಬಸು ಬೇವಿನಗಿಡದ ಅವರ ಸಾಹಿತ್ಯದಲ್ಲಿ ಭಾಷೆ–ಶೈಲಿ–ತಂತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(4), 64–70

ಮೂಡುವುದಿಲ್ಲ. ಬಹುತೇಕ ಕಥೆಗಳು ನಮ್ಮ ಕಣ್ಣಮುಂದೆಯೇ ನಡೆಯುತ್ತಿರುವ ಘಟನೆಗಳಂತೆ ಭಾಸವಾಗುತ್ತವೆ. ಅವರ ಹಲವು ಕಥೆಗಳು ತಾರ್ಕಿಕ ಅಂತ್ಯವನ್ನು ಕಾಣದೆ, ಬದುಕಿನ ಕ್ರಿಯೆಗಳು ನಿರಂತರವಾಗಿ ಮುಂದುವರಿಯುತ್ತವೆ ಎಂಬ ಅಂಶವನ್ನು ದಾಖಲಿಸುತ್ತವೆ.

**ಆಡುನುಡಿ (ಪ್ರಾದೇಶಿಕ ಉಪಭಾಷೆ)**

ವ್ಯಕ್ತಿಯು ಬದುಕುತ್ತಿರುವ ಪರಿಸರದಲ್ಲಿ ಬಳಕೆಯಲ್ಲಿರುವ ಭಾಷೆಯು ಆತನ ಸೃಜನಶೀಲ ಅಭಿವ್ಯಕ್ತಿಗೆ ಅತ್ಯಗತ್ಯವಾದುದು. ಲೇಖಕನನ್ನು ಬೆಳೆಸುವ ಪರಿಸರ, ಭೌಗೋಳಿಕ ಪ್ರದೇಶ ಮತ್ತು ಅಲ್ಲಿನ ಜನರ ಮಾತನಾಡುವ ರೀತಿಯನ್ನು ಕೃತಿಯಲ್ಲಿ ಅಳವಡಿಸಿಕೊಂಡಾಗ ಆ ಕೃತಿಗೆ ತನ್ನದೇ ಆದ ವೈಶಿಷ್ಟ್ಯತೆ ದೊರೆಯುತ್ತದೆ. ಸೃಜನಶೀಲತೆಯ ವಿವಿಧ ಸಾಧ್ಯತೆಗಳನ್ನು ಪ್ರಕಟಿಸುವುದರಲ್ಲಿ ಹಾಗೂ ಆ ಪ್ರದೇಶದ ಸಹೃದಯರ ಮೆಚ್ಚುಗೆಗೆ ಪಾತ್ರವಾಗುವುದರಲ್ಲಿ ಪ್ರಾದೇಶಿಕ ಭಾಷೆಯ ಬಳಕೆ ಮಹತ್ವದ ಪಾತ್ರ ವಹಿಸುತ್ತದೆ.

ಡಾ. ಬಸು ಬೇವಿನಗಿಡದವರು ತಮ್ಮ ಸಾಹಿತ್ಯ ರಚನೆಯ ಸಂದರ್ಭದಲ್ಲಿ ವಸ್ತುವಿನ ನಿರ್ದಿಷ್ಟತೆ, ಗತಿಶೀಲತೆ ಮತ್ತು ವಿಷಯಕ್ಕೆ ತಕ್ಕ ವರ್ಣನೆಗಾಗಿ ಧಾರವಾಡ ಜಿಲ್ಲೆಯ ಮುನವಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಭಾಷೆಯ ಸೊಗಡನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಇದನ್ನು ಅವರ ಕೆಲವು ಕಥೆಗಳಲ್ಲಿ ಅರ್ಥಪೂರ್ಣವಾಗಿ ಕಾಣಬಹುದು. ಇದಕ್ಕೆ ನಿದರ್ಶನವಾಗಿ ಬಾಳೆಯಕಂಬ ಕೃತಿಯಲ್ಲಿನ ಈ ಭಾಗವನ್ನು ಗಮನಿಸಬಹುದು:

"ಗಳಗಳ ಚರಿಗಿ ನೀರು ಕುಡಿದು ಹಾಲಿಲ್ಲದ ಕರಿ ಚಹಾವನ್ನು ಗಂಡನಿಗೂ ಮುದಕಿಗೂ ಕೊಟ್ಟು ಒಲೆಯ ಮುಂದೆ ರೊಟ್ಟಿಗೆ ಹಿಟ್ಟು ಕಲಿಸುತ್ತಲೇ ಸ್ವಲ್ಪ ಸುಡುಸುಡುವ ಚಹಾ ಕುಡಿದಾರಿಯಿತೆಂದು ಕಿಚ್ಚಿನಲ್ಲಿಟ್ಟಿದ್ದ ಸ್ಟೀಲಿನ ಬಟ್ಟಲನ್ನು ತುಟಿಗಿಟ್ಟುಕೊಂಡಳು. ತುಟಿ, ನಾಲಿಗೆ ಚುರ್ ಎಂದವು. ಆದರೂ ಗಂಟಲೊಳಗೆ ಬಿಸಿ ಇಳಿದು ಹೋಗಿ ಸ್ವಲ್ಪ ನಿರಾಳವಾದಂತಾಯಿತು. ಅದೇ ಸಮಾಧಾನದಲ್ಲಿ ದೊಪ್ ದೊಪ್ ಎಂದು ಹತ್ತು ರೊಟ್ಟಿ ಬಡಿದೊಗೆದು, ಹಿಟ್ಟಿನ ಪಲ್ಲೆ ತಿರುವಿಟ್ಟು ಕ್ವಾಣಮಗಿಯನ್ನು ಗಸ್ ಗಸ್ ತಿಕ್ಕಿಟ್ಟಳು. ಅಬಡಾ ಜಬಡಾ ಒಂದು ರೊಟ್ಟಿಯನ್ನು ತಾನೂ ತಿಂದು ಅವರು ಬೇಕಾದರೆ ತಿಂದರೆ ತಿನ್ನಲಿ ಬಿಟ್ಟರೆ ಬಿಡಲೆಂದು ಪಡಸಾಲೆಯ ಮೂಲೆಯಲ್ಲಿ ಹರಿದ ಚಾಪೆ ಹಾಸಿಕೊಂಡು ಹೊಡೆಯುತ್ತಿದ್ದ ಮೈಯನ್ನು ಚೆಲ್ಲಿದ್ದಳು." (ಬಾಳೆಯಕಂಬ, ಬಸು ಬೇವಿನಗಿಡದ, 2011, ಪು. 2)

ಇವರ ಕಥಾ ಸಾಹಿತ್ಯದ ಭಾಷೆಯು ಸರಳ, ಸ್ಪಷ್ಟ ಮತ್ತು ಜನಸಾಮಾನ್ಯರಿಗೆ ಒಂದೇ ಓದಿನಲ್ಲಿ ಅರ್ಥವಾಗುವಂತಹ ಗುಣಗಳನ್ನು ಹೊಂದಿದೆ. ಇದು ಅವರ ಸಾಹಿತ್ಯ ಕೃಷಿಯ ಯಶಸ್ಸಿಗೆ ಪ್ರಮುಖ ಕಾರಣವಾಗಿದೆ ಎನ್ನಬಹುದು. ನಿತ್ಯಜೀವನದಲ್ಲಿ ಕಂಡ ಘಟನೆಗಳು, ಸನ್ನಿವೇಶಗಳು ಮತ್ತು ವ್ಯಕ್ತಿಗಳ ನೋವುಗಳನ್ನು ಅವರು ಕಥಾವಸ್ತುವಿನ ಭಾಗವಾಗಿಸಿಕೊಂಡಿದ್ದಾರೆ. ಇದರಿಂದ ಓದುಗರು ಕಥೆಯ ವಿಷಯವನ್ನು ತಮ್ಮದೇ ಜೀವನದ ಅನುಭವಗಳಿಗೆ ಹೋಲಿಸಿಕೊಂಡು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ. ಈ ಅಂಶವು ಅವರ ಬರವಣಿಗೆಯನ್ನು ಮತ್ತಷ್ಟು ಆಪ್ತವಾಗಿಸುತ್ತದೆ.

**ಸತ್ವಯುತ ಗ್ರಾಮೀಣ ಭಾಷೆಯ ಬಳಕೆ**

ಡಾ. ಬಸು ಬೇವಿನಗಿಡದವರ ಸಾಹಿತ್ಯದಲ್ಲಿ ಗ್ರಾಮೀಣ ಭಾಷೆಯ ಸೊಗಡು ಸತ್ವಯುತವಾಗಿ, ಅರ್ಥಪೂರ್ಣವಾಗಿ ಮತ್ತು ರಸವತ್ತಾಗಿ ಬಳಕೆಯಾಗಿದೆ. ಅವರ ಸಾಹಿತ್ಯದಲ್ಲಿ ಗ್ರಾಮೀಣ ಪರಿಸರದ ನೆಲದ ಸತ್ವಯುತ ಭಾಷೆಯ ಕಂಪನ್ನು ಸೂರೆಗೊಂಡು, ಆ ಮೂಲಕ ಗ್ರಾಮೀಣ ಬದುಕು ಮತ್ತು ಸಂಸ್ಕೃತಿಯ ಅರಿವನ್ನು ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇದನ್ನು ಕೆಲವು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಬಹುದು.

"ಹೀಗೇಕಾಯ್ತೆಂದು ಅಣ್ಣ ದಿಗ್ಭ್ರಮೆಯಲ್ಲಿದ್ದರೆ ತಮ್ಮನಾದವನು ಎದುರು ಪಕ್ಷದವರ ವಿಜಯಯಾತ್ರೆಯಲ್ಲಿ ಪಾಲ್ಗೊಂಡಿದ್ದ. ತಡರಾತ್ರಿಯವರೆಗೂ ಆ ಗುಂಪು ಕುಣಿಯುವ, ಚೀರುವ ಶಬ್ದ ಕೇಳುತ್ತಿತ್ತು. ತಾವೆಲ್ಲ ಮಲಗಿದೆವು. ಇನ್ನೂ ರೆಪ್ಪೆ ರೆಪ್ಪೆಗೆ ಕೂಡಿರಲಿಲ್ಲ. ಅಷ್ಟರಲ್ಲಿ ಧಡ್, ಧಡ್ ಎಂದು ಓಡುವ, ಅಳುವ ಧ್ವನಿಗಳು ಕೇಳಿಬಂದವು. ಊರು ಗಡಬಡಿಸಿ ಎದ್ದಿತು…" (ನೆರಳಿಲ್ಲದ ಮರ, ಪು. 36)

ಈ ಭಾಗದಲ್ಲಿ ಧಾರವಾಡ ಭಾಗದ ಗ್ರಾಮೀಣ ಆಡುನುಡಿಯ ಸೊಗಡು, ಸ್ಥಳೀಯ ಜನರ ಮಾತಿನ ಧಾಟಿ ಹಾಗೂ ಗ್ರಾಮೀಣ ಬದುಕಿನ ವಾಸ್ತವಿಕತೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ. ಆಡುನುಡಿಯ ಬಳಕೆಯಿಂದ ಪಾತ್ರಗಳು ಕೃತಕವಾಗಿ ಕಾಣದೆ, ಓದುಗರಿಗೆ ಪರಿಚಿತ ವ್ಯಕ್ತಿಗಳಂತೆ ಭಾಸವಾಗುತ್ತವೆ.

**ಹೇಳಿಕೆಗಳು (ಸಂದರ್ಭೋಕ್ತಿಗಳು)**

ಡಾ. ಬಸು ಬೇವಿನಗಿಡದವರು ತಮ್ಮ ಸಾಹಿತ್ಯದಲ್ಲಿ ಬಳಸಿರುವ ಉವಾಚಗಳು ಮತ್ತು ಸಂದರ್ಭೋಕ್ತಿಗಳು ಅಧ್ಯಯನಯೋಗ್ಯವಾಗಿವೆ. ಈ ಹೇಳಿಕೆಗಳು ಅವರ ಬದುಕಿನ ಅನುಭವದಿಂದ ಮೂಡಿಬಂದ ಚಿಂತನಶೀಲ ಅಭಿವ್ಯಕ್ತಿಗಳಾಗಿವೆ. ಸುಭಾಷಿತಗಳಂತೆ ಓದುಗರನ್ನು ಚಿಂತನೆಗೆ ಪ್ರೇರೇಪಿಸುವ ಗುಣವನ್ನು ಅವು ಹೊಂದಿವೆ.

**ಉದಾಹರಣೆಗೆ:**

**ಸಂಬಂಧ:** "ಕಟ್ಟಕಡೆಯ ಬಾರಿಗೆ ತಾನು ಹುಬ್ಬಳ್ಳಿಯ ನೆಲದಲ್ಲಿ ನಿಂತಿದ್ದೇನೆ ಎಂದು ನಾಗರಾಜನಿಗೆ ಅನಿಸಿತು. ಕರುಳನ್ನು ಕತ್ತರಿಸಿ ಹೊರಟಿದ್ದೇನೆ." (ನೆರಳಿಲ್ಲದ ಮರ, ಪು. 1)

**ಸ್ವಭಾವ:** "ಹಗ್ಗವೆಂದು ಹಿಡಿದದ್ದು ಹಾವಾಗಿ ಹರಿಯುತ್ತಿದೆ." (ನೆರಳಿಲ್ಲದ ಮರ, ಪು. 2)

**ಹಣ:** "ಆ ನಾಗ್ಯಾ ಇಲ್ಲೇನು ದುಡಿದಾನಂತ ಆಸ್ತಿ ಕೇಳ್ತಾನು.. ನೌಕರಿಯ ಹರಾಮಿ ದುಡ್ಡು ಎಣಿಸ್ತಾನಲ್ಲ ಅದಕ್ಕ ಸೊಕ್ಕು ಬಂದೇತಿ." (ನೆರಳಿಲ್ಲದ ಮರ, ಪು. 2)

**ಕಾಲ:** "ಭೂತಕಾಲದಾಗ ಜೀವನ ಮಾಡೋದು ಬಿಟ್ಟು ವರ್ತಮಾನಕ್ಕ ಬಾ." (ನೆರಳಿಲ್ಲದ ಮರ, ಪು. 3)

**ವ್ಯಕ್ತಿತ್ವ:** "ನಿನಗ ಸ್ವಂತ ವ್ಯಕ್ತಿತ್ವ ಅನ್ನೋದ ಇಲ್ಲ. ನೀನು ಮಾಂವನ ಗುಲಾಮ ಆಗೀದಿ."

**ಮಾತು:** "ಮನಸ್ಸಿನಲ್ಲಿದ್ದುದ್ದನ್ನು ರಸಬಾಳೆ ಬಿಡಿಸಿದಂತೆ." (ಚೂರಾದ ಚಂದ್ರ, ಪು. 24)

ಈ ಸಂದರ್ಭೋಕ್ತಿಗಳು ಅಥವಾ ಉವಾಚಗಳು ಬದುಕಿನ ವಾಸ್ತವ ಚಿತ್ರಣವನ್ನು ಯಥಾವತ್ತಾಗಿ ಮೂಡಿಸುವುದರ ಜೊತೆಗೆ ಓದುಗರನ್ನು ಚಿಂತನಶೀಲರನ್ನಾಗಿ ಮಾಡುತ್ತವೆ. ವಸ್ತು, ವ್ಯಕ್ತಿ, ವಿಷಯ, ಘಟನೆ ಮತ್ತು ಕ್ರಿಯೆಗಳ ಒಳಾರ್ಥವನ್ನು ಗ್ರಹಿಸಲು ಸಹಕಾರಿಯಾಗುತ್ತವೆ. ಇವುಗಳಲ್ಲಿ ಡಾ. ಬಸು ಬೇವಿನಗಿಡದವರ ಅಪಾರ ಜೀವನಾನುಭವ ಮತ್ತು ಲೋಕಾನುಭವಗಳು ಪ್ರತಿಬಿಂಬಿಸುತ್ತವೆ. ಅವರ ಕಥನಶೈಲಿಯಲ್ಲಿ ಅನುಭವ, ವಿಡಂಬನೆ, ಹಿತೋಪದೇಶ, ವ್ಯಂಗ್ಯ, ಜೀವನದೃಷ್ಟಿ ಮತ್ತು ಬಂಡಾಯದ ನೆಲೆಗಳು ಕಾಣಿಸಿಕೊಳ್ಳುತ್ತವೆ.

ಮುಖ್ಯವಾಗಿ ತಮ್ಮ ಜನರ ಬದುಕಿನ ವಿವಿಧ ಮುಖಗಳನ್ನು, ಮನಸ್ಸುಗಳಲ್ಲಿ ಲೀನಗೊಂಡಿರುವ ಕುರೂಪಗಳನ್ನು ಆಕ್ರೋಶರಹಿತವಾಗಿ ಹಾಗೂ ಅನುಕಂಪದ ಭಾವನೆಯಿಂದ ಚಿತ್ರಿಸುತ್ತಾರೆ. ಗ್ರಾಮೀಣ ಪ್ರದೇಶಗಳ ಪ್ರಾದೇಶಿಕ ಉಪಭಾಷೆಯನ್ನು ಬಳಸಿಕೊಂಡು ಬದುಕಿನ ಸೂಕ್ಷ್ಮ ನೆಲೆಗಳನ್ನು ದಾಖಲಿಸುತ್ತಾರೆ. ಸಮಸ್ಯೆಯ ಸ್ವರೂಪ ಮತ್ತು ಅದರ ಸಾಧ್ಯ ಪರಿಹಾರಗಳನ್ನು ಓದುಗನೇ ಒಳಹೊಕ್ಕು ಪರಿಶೀಲಿಸುವಂತೆ ಮಾಡುವ ನಿರೂಪಣಾ ಕ್ರಮ ಇವರ ಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

**ಸಂಭಾಷಣೆ**

ಸಂಭಾಷಣೆಯು ಸಾಹಿತ್ಯದಲ್ಲಿ ಒಂದು ವಿಶಿಷ್ಟ ರೀತಿಯ ಆಕರ್ಷಣೆಯನ್ನು ಸೃಷ್ಟಿಸುತ್ತದೆ. ಲೇಖಕನು ಆಯ್ದುಕೊಂಡ ವಸ್ತುವಿಷಯಕ್ಕೆ ಪೂರಕವಾಗಿ ಹಾಗೂ ಅಭಿವ್ಯಕ್ತಿಯ ಅನುಕೂಲಕ್ಕಾಗಿ ಸಂಭಾಷಣೆಗಳು ಬಳಕೆಯಾಗುತ್ತವೆ. ಸಹೃದಯರಿಗೆ ಕೃತಿಯ

ಮರ್ಮವನ್ನು ಪರಿಣಾಮಕಾರಿಯಾಗಿ ತಲುಪಿಸುವಲ್ಲಿ ಸಂಭಾಷಣೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಪಾತ್ರಗಳ ನಡುವಿನ ಸಂಭಾಷಣೆಗಳಿಂದ ಕೃತಿಕಾರನ ಸಾಮರ್ಥ್ಯ, ಅರ್ಥವಂತಿಕೆ ಮತ್ತು ಚಾಣಾಕ್ಷತೆ ವ್ಯಕ್ತವಾಗುತ್ತದೆ.

ಡಾ. ಬಸು ಬೇವಿನಗಿಡದವರ ಕಥೆಗಳಲ್ಲಿ ಬಹುಪಾಲು ಕಥನಕ್ರಮವು ಅರ್ಥಪೂರ್ಣ ಮತ್ತು ಸ್ವಾರಸ್ಯಕರ ಸಂಭಾಷಣೆಗಳ ಮೂಲಕ ಸಾಗುವುದನ್ನು ಕಾಣಬಹುದು. ಅವರ ಕೃತಿಗಳಲ್ಲಿನ ಸಂಭಾಷಣೆಗಳು ನೈಜವಾಗಿದ್ದು, ಪರಿಸರ ಅಥವಾ ವೈಯಕ್ತಿಕ ಬದುಕಿನಲ್ಲಿ ಕಂಡ ಘಟನೆಗಳನ್ನು ಸರಳವಾದ ಆಡುಮಾತಿನ ರೀತಿಯಲ್ಲಿ ಚಿತ್ರಿಸುತ್ತವೆ. ಪರಿಸರಕ್ಕೆ ತಕ್ಕ ನಿರೂಪಣೆ ಮತ್ತು ಪಾತ್ರಗಳ ಸ್ವಭಾವಕ್ಕೆ ಅನುಗುಣವಾದ ಸಂಭಾಷಣೆಗಳನ್ನು ಬಳಸಿರುವುದರಿಂದ ಕಥೆಗಳು ಸಹಜವಾಗಿ ಮೂಡಿಬರುತ್ತವೆ.

**ಉದಾಹರಣೆಗೆ:**

ದೀಪಾ: "ನೋಡಿ ಸ್ವಲ್ಪ ನಾಚ್ರಿ, ಆಕಿ ಫಟಾಫಟ್ ಎಷ್ಟು ಚಂದ ಮಾತಾಡ್ತಾಳು. ಊರಿನ ಇತಿಹಾಸ ಹೇಳ್ತಾಳು. ನೀವು ಅದೀರಿ ಯಾವಾಗಲೂ ಬಾಯಿ ಬಿಕ್ಕೊಂಡು ಕುಂತೀರತೀರಿ."

ನಾಗರಾಜ: "ಈ ದಡ್ಡಿ ಸುಶೀಲಾಗ ಏನು ಬರುತ್ತಿತ್ತು. ಸಾಲಿಯೊಳಗ ಆಕಿ ದಡ್ಡಿ ಇದ್ಲು. ನಾನ ಆಕಿಗೆ ಕಲಿಸಿದೆ. ಅವಳಿಗೆ ಗಣಿತ, ವಿಜ್ಞಾನ ಕಲಿಸಿಕೊಟ್ಟಿದ್ದು ನಾನು."

ದೀಪಾ: ಕಣ್ಣರಳಿಸಿ "ಹಾಂ!" ಎಂದು ಉದ್ಗರಿಸಿದಳು.

ಸುಶೀಲಾ: "ಅಲ್ಲ ದೀಪಕ್ಕ, ಅಂವೇನು ಕಲಿಸ್ತಾನು? ಅಂವನ ಮಕಾ ನೋಡು. ಇಂವ ಕಾಲೇಜು ಕಲಿಯೋ ಮುಂದ ಅಮಾಸೆಗೊಮ್ಮೆ ಹೋಟೆಲಿಗೆ ರ್‍ತಿದ್ದ. ಅದು ಹೋಟೇಲ್ ಬಂದ್ ಇರುವಾಗನ ಬರಾಂವ."

ಈ ಸಂಭಾಷಣೆಯಲ್ಲಿ ಪಾತ್ರಗಳ ಸ್ವಭಾವ, ಪರಸ್ಪರ ಸಂಬಂಧ ಹಾಗೂ ಗ್ರಾಮೀಣ ಜೀವನದ ಮಾತಿನ ಧಾಟಿ ಸಹಜವಾಗಿ ವ್ಯಕ್ತವಾಗುತ್ತದೆ.

**ನಾಣ್ಣುಡಿ (ಗಾದೆಮಾತುಗಳು)**

ಡಾ. ಬಸು ಬೇವಿನಗಿಡದವರು "ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟು" ಎಂಬ ನಾಣ್ಣುಡಿಯ ಆಶಯದಂತೆ, ಸಾಹಿತ್ಯವನ್ನು ಹೆಣೆಯುವಾಗ ಅನಗತ್ಯ ವಿವರಗಳನ್ನು ನೀಡದೆ ಸಂದರ್ಭೋಚಿತವಾಗಿ ಗಾದೆಮಾತುಗಳನ್ನು ಬಳಸುತ್ತಾರೆ. ಘಟನೆಗೆ ಪೂರಕವಾಗಿ ಸಹಜ ಸಂಭಾಷಣೆಗಳನ್ನು ಹೆಣೆಯುವುದರ ಮೂಲಕ ಬರಹಕ್ಕೆ ತೀವ್ರತೆಯನ್ನು ನೀಡಿ ಪರಿಣಾಮಕಾರಿಯಾದ ಅನುಭವವನ್ನು ಸಹೃದಯರಿಗೆ ನೀಡುತ್ತಾರೆ.

ಗಾದೆಮಾತುಗಳು ಸತ್ವಯುತ ಭಾಷೆಯ ಜೀವಾಳವಾಗಿದ್ದು, ನಾಡಿನ ಜನರ ಜೀವನಾನುಭವಗಳ ಅಣಿಮುತ್ತುಗಳಂತಿವೆ. ಒಂದು ಪ್ರದೇಶದ ಜನಸಮುದಾಯದ ಸಂಸ್ಕೃತಿಯನ್ನು ಈ ಗಾದೆಗಳು ಹಿಡಿದಿಟ್ಟುಕೊಂಡಿರುತ್ತವೆ. ಜನಜೀವನದ ಗುಣದೋಷಗಳನ್ನು ಎತ್ತಿತೋರಿಸುವುದರ ಜೊತೆಗೆ ಮೌಲ್ಯಯುತ ಬದುಕಿಗೆ ಮಾರ್ಗದರ್ಶಿಯಾಗುತ್ತವೆ. ಗ್ರಾಮೀಣ ಪ್ರದೇಶಗಳ ಜನರು ತಮ್ಮ ದೈನಂದಿನ ಬದುಕಿನಲ್ಲಿ ಇಂತಹ ಗಾದೆಗಳನ್ನು ಸಹಜವಾಗಿ ಬಳಸುತ್ತಾ ಬಂದಿರುವುದನ್ನು ಕಾಣಬಹುದು.

**ಉದಾಹರಣೆಗೆ:**

"ಪ್ರತ್ಯಕ್ಷ ಕಂಡ್ರೂ ಪ್ರಾಮಾಣಿಸಿ ನೋಡಬೇಕು" (ಬಾಳೆಯಕಂಬ, 'ನಡೆಯೊಂದು ಪರಿ', ಪು. 40).

"ಹಗ್ಗವೆಂದು ಹಿಡಿದದ್ದು ಹಾವಾಗಿ ಹರಿಯುತ್ತಿದೆ" (ನೆರಳಿಲ್ಲದ ಮರ, ಪು. 2).

"ಗಿಣಿ ಸ್ವಭಾವದವನೆಂದು ತಿಳಿದಿದ್ದೆ ಆದರೆ ಅವನು ಗಿಡುಗನಾಗಿದ್ದಾನೆ" (ನೆರಳಿಲ್ಲದ ಮರ, ಪು. 5).

"ಹಿಂದಿಂದ ನೆನಸಿಕೊಂಡು ಹಿತ್ಲಾಗ ಅತ್ತರಂತ" (ಬಾಳೆಯಕಂಬ, 'ಮಿಕ್ಕಿಮೀರಿ ಹೋಹನ', ಪು. 20).

"ನೆಚ್ಚಿದ ಎಮ್ಮೆ ಕೋಣ ಈಯಿತೆಂಬಂತೆ" (ನೆರಳಿಲ್ಲದ ಮರ, 'ತುಳುಕಿ ಹೋಗಿತ್ತು', ಪು. 15).

"ಗೆದ್ದ ಮ್ಯಾಲ ಗೆದ್ದವಂಗ ಯಾರೂ ಬೇಕಾಗಿಲ್ಲ" (ನೆರಳಿಲ್ಲದ ಮರ, 'ಚೂರಾದ ಚಂದ್ರ', ಪು. 37).

"ಮೀಸಿ ಸರಿಯಾಗಿ ಮೂಡ್ಲಿ ತಗೋ" (ನೆರಳಿಲ್ಲದ ಮರ, 'ಜರಿ ರುಮಾಲು', ಪು. 49).

"ಐದೂ ಬಳ್ಳು ಸಮ ಇರ್ತಾವೇನು?" (ನೆರಳಿಲ್ಲದ ಮರ, 'ತುಳುಕಿಹೋಗಿತ್ತ', ಪು. 22).

**ಶೈಲಿ**

ಭಾಷೆ, ಶೈಲಿ ಮತ್ತು ತಂತ್ರಗಳು ಲೇಖಕನ ಕೃತಿಗಳಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿವೆ. ಲೇಖಕನು ತನ್ನ ಜೀವನಾನುಭವಗಳನ್ನು ಅಭಿವ್ಯಕ್ತಿಸಲು ಭಾಷೆಯನ್ನು ಮೂಲಸಾಮಗ್ರಿಯಾಗಿ ಬಳಸುತ್ತಾನೆ. ಇಂತಹ ಭಾಷೆಯಿಂದ ಒಡಮೂಡುವ ಎಲ್ಲ ಸಾಧ್ಯತೆಗಳನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳುವ ಕಾರ್ಯವನ್ನು ಶೈಲಿ ನಿರ್ವಹಿಸುತ್ತದೆ. ಲೇಖಕನು ಆಯ್ಕೆ ಮಾಡಿಕೊಂಡ ವಸ್ತುವಿಗೆ ಅನುಗುಣವಾಗಿ ತನ್ನ ಜೀವನಾನುಭವಗಳನ್ನು ಹಂಚಿಕೊಳ್ಳುವಾಗ ಬರವಣಿಗೆಯ ಕ್ರಮಗಳೊಂದಿಗೆ ತಂತ್ರವೂ ಸೇರಿಕೊಂಡು ಸಾಹಿತ್ಯದಲ್ಲಿ ವಿಶಿಷ್ಟ ಅಭಿವ್ಯಕ್ತಿಯನ್ನು ರೂಪಿಸುತ್ತದೆ.

"ಶೈಲಿ ಪ್ರಧಾನವಾಗಿ ವಸ್ತುನಿಷ್ಠ ನಿಜ. ಆದರೆ ಅದು ಸಮಷ್ಟಿಯ ಮೇಲೆ ಪ್ರಭಾವ ಬೀರುವುದಲ್ಲದೆ ಅದರಿಂದ ಪ್ರಭಾವಿತರಾಗುವುದೂ ಉಂಟು. ಆದ್ದರಿಂದ ಅದು ಸಾಹಿತಿಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ಸಾಧನವೂ ಹೌದು. ಒಂದು ಸಮಾಜದ ಸಂಸ್ಕೃತಿಯನ್ನು ಬಿಂಬಿಸುವ ದರ್ಶನವೂ ಹೌದು" (ಜವರೇಗೌಡ, ದೇ., ಗದ್ಯಶೈಲಿ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, 1978, ಪು. 170).

ಶೈಲಿಯು ಪ್ರಬುದ್ಧ ಲೇಖಕನನ್ನು ರೂಪಿಸುವುದರ ಜೊತೆಗೆ ಆತನ ವ್ಯಕ್ತಿತ್ವ ಮತ್ತು ಬದುಕಿನ ಸಾಮಾಜಿಕ-ಸಾಂಸ್ಕೃತಿಕ ಮಹತ್ವವನ್ನು ಪ್ರತಿಬಿಂಬಿಸುತ್ತದೆ. ಸಾಹಿತ್ಯದ ಅಭಿವ್ಯಕ್ತಿಯಲ್ಲಿ ಲೇಖಕನು ಆಯ್ಕೆ ಮಾಡಿಕೊಂಡ ವಸ್ತುವಿನ ನಿರೂಪಣಾ ವಿಧಾನವನ್ನು ವಿಶ್ಲೇಷಿಸುವುದೇ ಶೈಲಿ ಅಧ್ಯಯನ. ಈ ಶೈಲಿಯು ಪ್ರತಿಯೊಬ್ಬ ಲೇಖಕನಲ್ಲೂ ಭಿನ್ನವಾಗಿರುತ್ತದೆ.

ಡಾ. ಬಸು ಬೇವಿನಗಿಡದವರಿಗೆ ಪರಂಪರೆಯ ಮೌಲ್ಯಗಳಲ್ಲಿ ಅಪಾರ ಶ್ರದ್ಧೆಯಿದ್ದರೂ, ನವೀನ ಮೌಲ್ಯಗಳ ಶೋಧವೂ ಅವರಿಗೆ ಪ್ರಿಯವಾದ ಸಂಗತಿಯಾಗಿದೆ. ಬಂಡಾಯ, ನಿಸರ್ಗಸೌಂದರ್ಯ, ಗ್ರಾಮೀಣ ಪರಿಸರದಲ್ಲಿನ ಮಾನವ ಸಂಬಂಧಗಳು, ಹಳ್ಳಿಯ ಸಮುದಾಯಗಳ ಜಾತಿ ಮತ್ತು ವರ್ಗ ಸಂಘರ್ಷ, ಬಡತನ, ಹಸಿವು, ಜಮೀನ್ದಾರರ ಕ್ರೌರ್ಯ, ಶೋಷಣೆ, ಅನ್ಯಾಯ, ಅಸಮಾನತೆ, ಜನರ ಸಂಕಟ-ಸಾನ್ನಿಧ್ಯ, ಲಿಂಗಭೇದ, ಶಿಕ್ಷಣದ ಕೊರತೆ, ರೀತಿ-ರಿವಾಜುಗಳು, ತೊಳಲಾಟ, ಬದುಕಿನ ಅಭದ್ರತೆ ಮತ್ತು ಕ್ಷಾಮ ಮುಂತಾದ ಸಾಮಾಜಿಕ ಸಮಸ್ಯೆಗಳು ಅವರ ಸಾಹಿತ್ಯದ ಪ್ರಮುಖ ವಸ್ತುಗಳಾಗಿವೆ. ಇವೆಲ್ಲವೂ ಮೂಲತಃ ಬಂಡಾಯ ಮನೋಧರ್ಮದ ಶೈಲಿಯನ್ನು ರೂಪಿಸಿವೆ.

ಈ ಸಾಮಾಜಿಕ ವಸ್ತುಗಳ ಮೂಲಭೂತ ಭಾವನೆಗಳನ್ನು ಗ್ರಹಿಸಿ ಅವುಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ರಚನೆಯಲ್ಲಿ ಬುದ್ಧಿಯ ಕಸರತ್ತಿಗಿಂತ ಹೃದಯದ ಶ್ರೀಮಂತಿಕೆಯೇ ಮೇಲುಗೈ ಸಾಧಿಸಿದೆ. ಇದಕ್ಕಾಗಿಯೇ ಅವರ ಸಾಹಿತ್ಯದಲ್ಲಿ ಉದಾತ್ತ ಆಶಯ, ಆದರ್ಶ, ಜೀವನಾನುಭವ, ಅನುಕಂಪ, ಪೂರ್ಣದೃಷ್ಟಿ ಮತ್ತು ಕರ್ತೃತ್ವಶಕ್ತಿ ಕಾಣಿಸಿಕೊಳ್ಳುತ್ತವೆ. ಅವರ ಸಾಹಿತ್ಯದ ಅಭಿವ್ಯಕ್ತಿಯಲ್ಲಿ ನೇರತೆ, ಖಚಿತತೆ ಮತ್ತು ಆತ್ಮೀಯತೆ ಪ್ರಮುಖ ಗುಣಗಳಾಗಿವೆ. ಸಮಸ್ಯೆಗಳನ್ನು ನಿರೂಪಿಸುವಾಗಲೂ ಓದುಗರ ಚಿಂತನೆಗೆ ಅವಕಾಶ ನೀಡುವ ಪ್ರಶ್ನೆಗಳನ್ನು ಉಳಿಸುವುದು ಅವರ ಬರವಣಿಗೆಯ ವೈಶಿಷ್ಟ್ಯವಾಗಿದೆ.

ಆಧುನಿಕತೆಯ ಪ್ರವೇಶದಿಂದಾಗಿ ಗ್ರಾಮೀಣ ಬದುಕು ಪಲ್ಲಟಗೊಳ್ಳುತ್ತಿರುವ ರೀತಿ ಮತ್ತು ಅದರ ಪರಿಣಾಮಗಳನ್ನು ಶೋಧಿಸುವ ಪ್ರಕ್ರಿಯೆಯಂತೆ

ಅವರ ಕಥೆಗಳ ಆಶಯ ರೂಪುಗೊಂಡಿದೆ. ಧಾರವಾಡದ ಸುತ್ತಮುತ್ತಲಿನ ಪ್ರಾದೇಶಿಕ ಉಪಭಾಷೆ ಹಾಗೂ ಜಾನಪದ ಸೊಗಡನ್ನು ಒಳಗೊಂಡ ಭಾಷಾಶೈಲಿಯ ಸಾಹಿತ್ಯಕೃತಿಗಳು ಡಾ. ಬಸು ಬೇವಿನಗಿಡದವರ ಸಾಹಿತ್ಯಿಕ ಕೀರ್ತಿಯನ್ನು ಹೆಚ್ಚಿಸಿವೆ. ಅವರು ಬಳಸಿರುವ ಆಡುನುಡಿ, ನಾಣ್ಣುಡಿಗಳು, ವರ್ಣನೆ ಮತ್ತು ಸಂಭಾಷಣೆಗಳ ಅಧ್ಯಯನದಿಂದ ಅವರ ವಿಶಿಷ್ಟ ಭಾಷಾಶೈಲಿಯನ್ನು ಗುರುತಿಸಬಹುದು.

**ತಂತ್ರ**

ಆಧುನಿಕ ಸಾಹಿತ್ಯವು ಕಥೆ, ಕಾದಂಬರಿ, ಕಾವ್ಯ, ನಾಟಕ, ಮಕ್ಕಳ ಸಾಹಿತ್ಯ, ಅನುವಾದ ಸಾಹಿತ್ಯ ಮುಂತಾದ ಹಲವಾರು ಪ್ರಕಾರಗಳನ್ನು ಒಳಗೊಂಡಿದೆ. ಪ್ರತಿಯೊಂದು ಸಾಹಿತ್ಯ ಪ್ರಕಾರವೂ ತನ್ನದೇ ಆದ ತಂತ್ರವಿನ್ಯಾಸವನ್ನು ಹೊಂದಿರುತ್ತದೆ. ಸಾಹಿತ್ಯವು ಸಹೃದಯರನ್ನು ತಲುಪುವ ಹಾಗೂ ಓದುಗರೊಂದಿಗೆ ಸಂವಾದವನ್ನು ಸಾಧಿಸುವ ಮಾಧ್ಯಮವಾಗಿರುವುದರಿಂದ, ಅದನ್ನು ಪರಿಣಾಮಕಾರಿಯಾಗಿ ರೂಪಿಸುವಲ್ಲಿ ವಿವಿಧ ತಂತ್ರಗಳು ಸಹಕಾರಿಯಾಗುತ್ತವೆ. ಡಾ. ಬಸು ಬೇವಿನಗಿಡದವರ ಸಾಹಿತ್ಯದಲ್ಲಿ ಇಂತಹ ತಂತ್ರಗಳು ಸಾಧಿತವಾಗಿರುವ ರೀತಿಯನ್ನು ಇಲ್ಲಿ ಗಮನಿಸಬಹುದು.

ತಂತ್ರವೆಂದರೆ ಕಥೆಯನ್ನು ನಿರೂಪಿಸುವ ವಿಧಾನ ಎಂದು ಅರ್ಥೈಸಬಹುದು. ಸಾಮಾನ್ಯದಲ್ಲಿ ಮಹತ್ತನ್ನು ಹುಡುಕುವುದು ಸಾಹಿತ್ಯದ ಒಂದು ಪ್ರಮುಖ ಲಕ್ಷಣ. ಸಾಹಿತ್ಯವು ಕರ್ತೃವಿನ ಜ್ಞಾನ, ಪಾಂಡಿತ್ಯ, ಕೌಶಲ್ಯ, ಅನುಭವ, ಗ್ರಹಣಶಕ್ತಿ, ಆಂತರ್ಯದ ಅಭೀಪ್ಸೆ, ಹೊಸ ದೃಷ್ಟಿಕೋನ, ಚಿಂತನಶಕ್ತಿ, ವೈಚಾರಿಕ ಪ್ರಜ್ಞೆ ಮತ್ತು ವಿಷಯವನ್ನು ಪ್ರತಿಪಾದಿಸುವ ಗಟ್ಟಿತನವನ್ನು ಒಳಗೊಂಡಿರುತ್ತದೆ. ವಸ್ತುವಿನ ಸನ್ನಿವೇಶದ ತೀವ್ರತೆಯನ್ನು ಸೂಕ್ಷ್ಮವಾಗಿ ಗ್ರಹಿಸಿ ಅದನ್ನು ನಿರೂಪಿಸುವ ರೀತಿಯೇ ತಂತ್ರವಾಗಿದೆ.

ಡಾ. ಬಸು ಬೇವಿನಗಿಡದವರು ಅಪ್ಪಟ ಗ್ರಾಮೀಣ ಸಂಸ್ಕೃತಿಯನ್ನು ಅರಗಿಸಿಕೊಂಡು ತಮ್ಮದೇ ಆದ ವಿಶಿಷ್ಟ ಭಾಷಾಶೈಲಿಯಲ್ಲಿ ಬರೆಯುತ್ತಾ, ಸಮಕಾಲೀನ ಕೌಟುಂಬಿಕ ಕಲಹಗಳಿಗೆ ಕಾರಣಗಳು ಮತ್ತು ಅವುಗಳ ಪರಿಣಾಮಗಳನ್ನು ಚಿತ್ರಿಸುವಲ್ಲಿ ಹಲವು ತಂತ್ರಗಳನ್ನು ಬಳಸಿದ್ದಾರೆ. ಕಥಾವಸ್ತುವನ್ನು ಕಟ್ಟಿಕೊಡುವಲ್ಲಿ ಅವರ ವರ್ಣನಾತ್ಮಕ ತಂತ್ರ ಪ್ರಮುಖ ಪಾತ್ರ ವಹಿಸುತ್ತದೆ.

ಉದಾಹರಣೆಗೆ, ಬಾಳೆಯಕಂಬ ಕೃತಿಯಲ್ಲಿ ರುದ್ರವ್ವ ತನ್ನ ಮಗನಿಗೆ ಅವನ ಹೆಂಡತಿಯ ವರ್ತನೆಯ ಕುರಿತು ಹೇಳುವ ಸಂದರ್ಭವನ್ನು ಲೇಖಕರು ಗ್ರಾಮೀಣ ಆಡುನುಡಿಯಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ:

"ಆಕಿ ಮಾರಿಗೆ ಮಳ್ಳ ಆಗಿ ಅಲ್ಲೇ ಬೀಳ್ತಿಯೇನೋ? ದುಡಿಯುವ ಖಬರಿಲ್ಲೇನ ನಿನಗ? ಆಕಿ ನಮ್ಮ ಮನಿ ಹಾಳ ಮಾಡಾಕ ಬಂದಾಳ ತಗೋ... ನನಗ ಗೊತ್ತೈತಿ ಯಾವಾಗ ಈ ಮನಿ ಒಡೆದೇನೀ ಅಂತ ಕಾಯಕ ಹತ್ತಾಳು. ನಾಕೈದು ತಲೆಮಾರು ಕೂಡಿ ಇದ್ದ ಮನೆತನ ಈಕಿ ಬಂದ ಕೂಡ್ಲೆ ಜಗಳ ಆಗಬೇಕಂದ್ರ ಇದರಾಗ ಏನೋ ಮಸಲತ್ತ ಐತಿ..." (ಬಾಳೆಯಕಂಬ, ಪು. 5)

ಈ ಭಾಗದಲ್ಲಿ ಅತ್ತೆ ರುದ್ರವ್ವನ ಮನೋಭಾವ, ಕುಟುಂಬ ವ್ಯವಸ್ಥೆಯ ಬಗೆಗಿನ ಆಕೆಯ ನಿಲುವು ಮತ್ತು ಸೊಸೆಯ ಬಗ್ಗೆ ಇರುವ ಅಸಮಾಧಾನವನ್ನು ಲೇಖಕರು ಸಂಭಾಷಣೆ ಮತ್ತು ವರ್ಣನೆಯ ಮೂಲಕ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ. ಗ್ರಾಮೀಣ ಕುಟುಂಬದ ಒಳಗಿನ ಸಂಘರ್ಷವನ್ನು ಸಹಜವಾಗಿ ಚಿತ್ರಿಸುವಲ್ಲಿ ಈ ತಂತ್ರ ಯಶಸ್ವಿಯಾಗಿದೆ.

**ಉಪಸಂಹಾರ**

ಡಾ. ಬಸು ಬೇವಿನಗಿಡದವರ ಸಾಹಿತ್ಯದಲ್ಲಿ ಭಾಷೆ, ಶೈಲಿ ಮತ್ತು ತಂತ್ರಗಳು ಪರಸ್ಪರ ಪೂರಕವಾಗಿ ಕಾರ್ಯನಿರ್ವಹಿಸುತ್ತವೆ. ಅವರ ಸಾಹಿತ್ಯದ ಪ್ರಮುಖ ಶಕ್ತಿ ಪ್ರಾದೇಶಿಕ ಆಡುನುಡಿ, ಗ್ರಾಮೀಣ ಭಾಷೆಯ

ಸೊಗಡು, ಸಹಜ ಸಂಭಾಷಣೆ, ಸಂದರ್ಭೋಚಿತ ನಾಣ್ಣುಡಿಗಳು, ಪರಿಣಾಮಕಾರಿ ವರ್ಣನೆ ಮತ್ತು ವಾಸ್ತವಿಕ ಕಥನಶೈಲಿಯಲ್ಲಿದೆ. ಅವರ ಕೃತಿಗಳಲ್ಲಿ ಗ್ರಾಮೀಣ ಬದುಕಿನ ವಿವಿಧ ಆಯಾಮಗಳು, ಮಾನವ ಸಂಬಂಧಗಳ ಸಂಕೀರ್ಣತೆ, ಬಡತನ, ಶೋಷಣೆ, ಅಸಮಾನತೆ, ಜಾತಿ–ವರ್ಗ ಸಂಘರ್ಷ, ಲಿಂಗಭೇದ, ಶಿಕ್ಷಣದ ಕೊರತೆ ಹಾಗೂ ಸಾಮಾಜಿಕ ಪಲ್ಲಟಗಳು ಜೀವಂತವಾಗಿ ಮೂಡಿಬರುತ್ತವೆ. ಅವರ ಭಾಷೆಯಲ್ಲಿ ನೆಲದ ಸತ್ವವಿದ್ದು, ಶೈಲಿಯಲ್ಲಿ ನೇರತೆ ಮತ್ತು ಆತ್ಮೀಯತೆ ಕಂಡುಬರುತ್ತದೆ. ತಂತ್ರದಲ್ಲಿ ವಾಸ್ತವಿಕತೆ ಮತ್ತು ವೈಚಾರಿಕತೆ ಪ್ರಧಾನವಾಗಿವೆ. ಅವರ ಹರಿತವಾದ ಓದು ಮತ್ತು ಜೀವನಾನುಭವಗಳು ವೈವಿಧ್ಯಮಯ ಕಥಾಹಂದರವನ್ನು ರೂಪಿಸಲು ನೆರವಾಗಿವೆ. ಅವರು ಉತ್ತಮ ಅನುವಾದಕರಾಗಿರುವುದರಿಂದ ವಿವಿಧ ಭಾಷೆಗಳ ಸಾಹಿತ್ಯದ ಒಳನೋಟವನ್ನೂ ಹೊಂದಿದ್ದಾರೆ. ಹೀಗಾಗಿ ಅವರ ಸಾಹಿತ್ಯದಲ್ಲಿ ಸಾಮಾಜಿಕ ವಿಸ್ತಾರ ಮತ್ತು ಸಮಾಜಮುಖಿ ಸ್ಪಂದನೆಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಕನ್ನಡದ ನೆಲದ ಭಾಷಾ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಡಾ. ಬಸು ಬೇವಿನಗಿಡದವರ ಕೊಡುಗೆ ಗಮನಾರ್ಹವಾಗಿದೆ.

**ಪರಾಮರ್ಶನ ಗ್ರಂಥಗಳು**


- ಬಸು ಬೇವಿನಗಿಡದ. (2011). *ಬಾಳೆಯಕಂಬ.* ಚೈತ್ರ ಪ್ರಕಾಶನ.
- ಬಸು ಬೇವಿನಗಿಡದ. (2019). *ನೆರಳಿಲ್ಲದ ಮರ.* ಪಲ್ಲವ ಪ್ರಕಾಶನ.
- ಬಸು ಬೇವಿನಗಿಡದ. (2018). *ಓಡಿ ಹೋದ ಹುಡುಗ.* ಅಭಿನವ ಪ್ರಕಾಶನ.
- ಬಸು ಬೇವಿನಗಿಡದ. (2022). *ಒಳ್ಳೆಯ ದೆವ್ವ.* ವಸಂತ ಪ್ರಕಾಶನ.
- ಹೊನ್ನುಸಿದ್ಧಾರ್ಥ, ಸಿ. ಬಿ., & ಚಿತ್ತಯ್ಯ ಪೂಜಾರ್. (n.d.). *ಸಮಗ್ರ ಕನ್ನಡ ಸಾಹಿತ್ಯ ಚರಿತೆ (ಸಂಪುಟ 1).*
- ಜವರೇಗೌಡ, ದೇ. (1978). *ಗದ್ಯಶೈಲಿ.* ಡಿ.ವಿ.ಕೆ. ಮೂರ್ತಿ ಪ್ರಕಾಶನ.
- ಮಲ್ಲಿಕಾರ್ಜುನ, ಕೆ. (2011). *ಕುಂ.ವೀ. ಕಾದಂಬರಿಗಳು: ಒಂದು ಅಧ್ಯಯನ.* ಜ್ಯೋತಿ ಪ್ರಕಾಶನ.